ಕಡಲೆಕಾಯಿ

ನವೆಂಬರ್ ತಿಂಗಳಿನಲ್ಲಿ ಬಿತ್ತನೆ ಮಾಡುವುದರ ಮೂಲಕ ಅತ್ಯಧಿಕ ಇಳುವರಿಯನ್ನು ಪಡೆಯಬಹುದೆಂಬ ಅಂಶವನ್ನು ಗುರುತಿಸಲಾಗಿದೆ.

ತರಕಾರಿ

ಅಧಿಕ ಇಳುವರಿ ಸಿಹಿ ಗೆಣಸು (ಸಿ-48), ಪೂಸ ಜ್ವಾಲ ಮೆಣಸಿನಕಾಯಿ, ಪೂಸ, ಚೇತ್ಕಿ, ಮೂಲಂಗಿ, ಅಧಿಕ ಇಳುವರಿ ಹಾಗಲ, ಅಲಸುಂಡೆ, ಅಧಿಕ ಸಕ್ಕರೆ ಅಂಶವನ್ನು ಹೊಂದಿದ ಕಲ್ಲಂಗಡಿ (ಅರ್ಕ ಜ್ಯೋತಿ) ಯನ್ನು ಈ ಪ್ರಾಂತ್ಯದಲ್ಲಿ ಗುರುತಿಸಲಾಗಿದೆ.

ಇದಲ್ಲದೆ, ಭತ್ತದ ಆಧಾರಿತ ಬೆಳೆಯ ಪದ್ಧತಿಯನ್ನು ಹಾಗೂ ದ್ವಿದಳ ಧಾನ್ಯಗಳು, ಎಣ್ಣೆಕಾಳುಗಳು, ಗೇರುಬೀಜವನ್ನೊಳಗೊಂಡಂತೆ ತೋಟಗಾರಿಕೆ ಬೆಳೆಗಳು ಕಬ್ಬು ಮತ್ತು ಒಳನಾಡು ಮೀನುಗಾರಿಕೆಯಲ್ಲಿ ಸುಧಾರಿತ ತಾಂತರಿಕ ಸಂಶೋಧನೆಯನ್ನು ಮಾಡಲಾಗಿದೆ.

ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿ ಪಡಿಸುವುದು

724 - ಶ್ರೀ ಶಿವಾನಂದ ಹೆಚ್ ಕೌಜಲಗಿ (ಬೈಲಹೊಂಗಲ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಹಾರಾಷ್ಟ್ರ ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿಪಡಿಸಿರುವಂತೆ ಈ ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಆ) ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿ ಉಳಿದ ರಾಜ್ಯಗಳಿಗಿಂತ ಹಿಂದೆ ಬಿದ್ದಿರುವುದು ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಅಭಿವೃದ್ಧಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು):

ಅ) ಹೌದು

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಉತ್ತಮ ಮಟ್ಟದ ಬಿತ್ತನೆ ಬೀಜಗಳ ಅಭಾವ

396 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಜಿರಾದ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಉತ್ತಮ ಗುಣಮಟ್ಟದ ಬೀಜವು ಅಗತ್ಯಕ್ಕೆ ಸಾಕಾಗುವಷ್ಟು ಲಭ್ಯವಾಗದೆ ಇರುವುದನ್ನು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ರೈತರು ಪ್ರಾಮಾಣೀಕೃತ ಬಿತ್ತನೆ ಬೀಜಗಳನ್ನು ಉತ್ಪಾದಿಸುವಲ್ಲಿ ಸರ್ಕಾರವು ಅವರಿಗೆ ಯಾವ ಸೌಲಭ್ಯಗಳನ್ನು ಒದಗಿಸಿದೆ.

ಇ) ರೈತರಿಗೆ ಪ್ರಾಮಾಣೀಕೃತ ಬಿತ್ತನೆ ಬೀಜಗಳನ್ನು ಸರಬರಾಜು ಮಾಡುವಲ್ಲಿ ಕರ್ನಾಟಕ ರಾಜ್ಯ ಬೀಜ ನಿಗಮವು ಕಳೆದ 3 ವರ್ಷಗಳಲ್ಲಿ ಯಾವ ಯೋಜನೆಯನ್ನು ರೂಪಿಸಿದೆ.

ಈ) ಮುಂಬರುವ ವರ್ಷಗಳಲ್ಲಿ ರಾಜ್ಯದ ರೈತರುಗಳಿಗೆ ಪ್ರಾಮಾಣೀಕೃತ ಬಿತ್ತನೆ ಬೀಜಗಳನ್ನು ಸುಲಭವಾಗಿ ದೊರೆಯುವಂತೆ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಅನುಸರಿಸಿದೆ?

ಶ್ರೀ ಹೆಚ್.ಎಂ. ರೇವಣ್ಣ (ಕೃಷಿ ಸಚಿವರು):

ಅ) ಋತುಮಾನದ ಪ್ರಾರಂಭದಲ್ಲಿ ಹತ್ತಿ ಬೀಜದ ಕೊರತೆ ಸ್ವಲ್ಪ ಮಟ್ಟಿಗೆ ಮಾತ್ರ ಕಂಡು ಬಂದಿತ್ತು. ಅನಂತರ, ಇದರ ಪೂರೈಕೆಗೆ ವ್ಯವಸ್ಥೆ ಮಾಡಲಾಯಿತು.

ಆ) ಸರ್ಕಾರವು ಬೀಜ ನಿಗಮದ ಮುಖಾಂತರ ಮೂಲ ಬಿತ್ತನೆ ಬೀಜವನ್ನು ಪೂರೈಸುತ್ತಿದೆ. ಹಾಗೂ ಕರಾರಿನಂತೆ ಬೆಳೆದ ಬೀಜವನ್ನು ನಿಗಧಿತ ಬೆಲೆಗೆ ಖರೀದಿಸುತ್ತಿದೆ.

ಇ) ಕಳೆದ 3 ವರ್ಷಗಳು ಪ್ರಮಾಣಿತ ಬಿತ್ತನೆ ಬೀಜಗಳನ್ನು ವಿತರಣೆ ಮಾಡಲು ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಬೀಜ ನಿಗಮವು ಹಾಕಿಕೊಳ್ಳಲಾಗಿದ್ದು ಅದರ ಸಾಧನೆಯು ಕೆಳಕಂಡಂತಿದೆ.

ವಿವರಣೆ ಮಾಡಿರುವ ಬಿತ್ತನೆ ಬೀಜ

(ಕ್ವಿಂಟಾಲುಗಳಲ್ಲಿ)

ಬೀಜ	91-92	92-93	93-94
ಏಕದಳ ಧಾನ್ಯಗಳು	58675	54381	67569
ದ್ವಿದಳ ಧಾನ್ಯಗಳು	8073	12423	7991
ಎಣ್ಣೆ ಕಾಳುಗಳು	5909	5922	12274
ಹೈಬ್ರಿಡ್ ಹತ್ತಿ	3591	4685	2622
ಒಟ್ಟು	**76248**	**77411**	**90456**

ಇದಲ್ಲದೆ, ಬೀಜಗಳ ಕೊರತೆ ಕಂಡು ಬಂದಲ್ಲಿ ಅದನ್ನು ಸಹ ಪೂರೈಸಲು ಬೀಜ ನಿಗಮವು ಕ್ರಮ ತೆಗೆದುಕೊಳ್ಳುತ್ತದೆ.

ಈ) ರೈತರಿಂದ ಪ್ರಮಾಣಿತ ಬಿತ್ತನೆ ಬೀಜದ ಬೇಡಿಕೆಯು ಹೆಚ್ಚುತ್ತಿರುವುದನ್ನು ಮನಗಂಡು ಅದನ್ನು ಪೂರೈಸಲು ಅನುಕೂಲವಾಗುವಂತೆ 94-95ನೇ ಸಾಲಿನಲ್ಲಿ "ನೊಂದಾಯಿತ ಬೀಜ ಉತ್ಪಾದಕರಿಗೆ ಉತ್ತೇಜನೆ" ಎಂಬ ಯೋಜನೆಯನ್ನು ರೂಪಿಸಿ ಜಾರಿಗೊಳಿಸಲು ಸರ್ಕಾರವು ಪರಿಶೀಲಿಸುತ್ತಿದೆ. ಇದರಲ್ಲಿ ಪ್ರಮಾಣೀಕೃತ ಬೀಜೋತ್ಪಾದನೆ ತೆಗೆದುಕೊಳ್ಳುವ ರೈತರಿಗೆ ಪ್ರೋತ್ಸಾಹ ಧನ ನೀಡಲು ಯೋಜಿಸಲಾಗಿದೆ. ಇದಲ್ಲದೆ ರೈತರಿಗೆ ಉತ್ತಮ ಗುಣಮಟ್ಟದ ಬೀಜದ ಕೊರತೆ ಕಂಡು ಬರದಂತೆ ನೋಡಿಕೊಳ್ಳಲು 93-94ನೇ ಸಾಲಿನಲ್ಲಿ ಜಾರಿಗೊಳಿಸಿದ "ಬೀಜ ಖರೀದಿ ಹಾಗೂ ಮಾರಾಟ ಯೋಜನೆಯನ್ನು 94-95ನೇ ಸಾಲಿನಲ್ಲಿ ಮುಂದುವರಿಸಲಾಗುತ್ತಿದೆ. ಇದರಿಂದಾಗಿ ಸ್ಥಳೀಯವಾಗಿ ಕೊರತೆ ಕಂಡು ಬರಬಹುದಾದ ಬಿತ್ತನೆ ಬೀಜಗಳನ್ನು ಇತರೆ ಮೂಲಗಳಿಂದ ಖರೀದಿಸಿ ಗುಣಮಟ್ಟದ ಬೀಜಗಳನ್ನು ವಿತರಣೆಗೆ ದೊರಕಿಸಬಹುದಾಗಿದೆ.

ಬೀದರ್ ಜಿಲ್ಲೆಯಲ್ಲಿ ಹಾಪ್‌ಕಾಮ್

394 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಹಾಪ್‌ಕಾಮ್ಸ್ ಕಾರ್ಯನಿರ್ವಹಿಸುತ್ತಿದೆ?

ಆ) ಈ ವ್ಯವಸ್ಥೆಯನ್ನು ಹೈದರಾಬಾದ್ ಕರ್ನಾಟಕ ಪ್ರದೇಶದ ಯಾವ ಯಾವ ಜಿಲ್ಲೆಗಳಿಗೆ ವಿಸ್ತರಿಸಲಾಗುವುದು?

ಇ) ಬೀದರ್ ಜಿಲ್ಲೆಯಲ್ಲಿ ಹಾಪ್‌ಕಾಮ್ಸ್‌ಗಳನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರ ಪರಿಶೀಲಿಸುವುದೇ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು) :